# ಮಂಗಳೂರು ವಿಶ್ವವಿದ್ಯಾನಿಲಯ

**ದಿನಾಂಕ 23.07.2022ರಂದು ಪೂರ್ವಾಹ್ನ ಗಂಟೆ 10:00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2022ನೇ ಸಾಲಿನ ಐದನೆಯ ಸಾಮಾನ್ಯ ಸಭೆಯ ನಡವಳಿಗಳು.**

**ಉಪಸ್ಥಿತರು:**

| ಕ್ರ. ಸಂ. | | | ಸಹಿ |
|---|---|---|---|
| 1. | ಪ್ರೊ. ಪಿ. ಸುಬ್ರಹ್ಮಣ್ಯ ಯಡಪಡಿತ್ತಾಯ<br>ಕುಲಪತಿಗಳು | ಅಧ್ಯಕ್ಷರು | |
| 2. | ಪ್ರೊ. ಕರುಣಾಕರ್ ಎ. ಕೋಟೆಗಾರ್ | ಸದಸ್ಯರು | |
| 3. | ಶ್ರೀ ರವಿಚಂದ್ರ ಪಿ.ಎಂ. | ಸದಸ್ಯರು | |
| 4. | ಡಾ. ಜೆರಾಲ್ಡ್ ಸಂತೋಷ್ ಡಿ'ಸೋಜ,<br>ಡೀನರು | ಸದಸ್ಯರು | |
| 5. | ಡಾ. ಶಂಕರ ಭಟ್ ಪಿ. | ಸದಸ್ಯರು | |
| 6. | ಶ್ರೀಮತಿ ಸುಭಾಶಿಣಿ ಶ್ರೀವತ್ಸ | ಸದಸ್ಯರು | |
| 7. | ಶ್ರೀ ಕೆ. ರಮೇಶ | ಸದಸ್ಯರು | |
| 8. | ಶ್ರೀ ವಿವೇಕಾನಂದ ಪನಿಯಾಳ | ಸದಸ್ಯರು | |
| 9. | ಶ್ರೀ ರವೀಂದ್ರನಾಥ ರೈ | ಸದಸ್ಯರು | |
| 10. | ಡಾ. ಎಂ. ಎಸ್. ತಳವಾರ | ಸದಸ್ಯರು | |
| 11. | ಶ್ರೀ ಮೋಹನ್ ಪಡಿವಾಳ್ | ಸದಸ್ಯರು | |
| 12. | ಡಾ. ಎ. ಪಾರ್ವತಿ ಅಪ್ಪಯ್ಯ | ಸದಸ್ಯರು | |
| 13. | ಪ್ರೊ. ವಿಶ್ವನಾಥ್. ಪ್ರಾಧ್ಯಾಪಕರು | ಸದಸ್ಯರು | |
| 14. | ಡಾ. ಸಿಪ್ರಿಯನ್ ಮೊಂತೇರೋ<br>ಪ್ರಾಂಶುಪಾಲರು, ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ<br>(ಸಾರ್ವಜನಿಕ ಶಿಕ್ಷಣ ಆಯುಕ್ತರ ಪರವಾಗಿ) | ಸದಸ್ಯರು | |
| 15. | ಪ್ರೊ. ಪಿ. ಎಲ್. ಧರ್ಮ<br>ಕುಲಸಚಿವರು (ಪರೀಕ್ಷಾಂಗ) | ಸದಸ್ಯರು | |
| 16. | ಪ್ರೊ. ಕೆ. ಎಸ್. ಜಯಪ್ಪ<br>ಹಣಕಾಸು ಅಧಿಕಾರಿ (ಪ್ರಭಾರ) | ವಿಶೇಷ<br>ಆಹ್ವಾನಿತರು | |
| 17. | ಪ್ರೊ. ಕಿಶೋರ್ ಕುಮಾರ್ ಸಿ. ಕೆ.<br>ಕುಲಸಚಿವರು (ಆಡಳಿತ) | ಸದಸ್ಯ<br>ಕಾರ್ಯದರ್ಶಿ | |

## ಪ್ರಾರಂಭಿಕ

ಪ್ರಾರಂಭದಲ್ಲಿ ಕುಲಸಚಿವರು ಸಭಾಧ್ಯಕ್ಷರಾದ ಮಾನ್ಯ ಕುಲಪತಿಗಳು ಹಾಗೂ ಎಲ್ಲಾ ಸಿಂಡಿಕೇಟು ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿದರು.

## ಪ್ರಾಸ್ತಾವಿಕ

1. ಬಾಗಲಕೋಟೆ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ (ನಿ.), ಬಾಗಲಕೋಟೆ – 587103 ಈ ಬ್ಯಾಂಕ್‌ನಲ್ಲಿ ಖಾಲಿಯಿರುವ ವಿವಿಧ ಹುದ್ದೆಗಳ ನೇರ ನೇಮಕಾತಿ ಮಾಡಿಕೊಳ್ಳುವ ಸಲುವಾಗಿ ಲಿಖಿತ ಪರೀಕ್ಷೆ ಜರುಗಿಸಿ ಕೊಡುವ ಕಾರ್ಯವನ್ನು ಮಂಗಳೂರು ವಿಶ್ವವಿದ್ಯಾನಿಲಯದ ಕುಲಸಚಿವರು (ಪ) ಕಛೇರಿಯಿಂದ ಪರೀಕ್ಷಾ ಕಾರ್ಯಗಳನ್ನು ನಡೆಸಲಾಗುವ ವಿಚಾರವನ್ನು ಸಭೆಯ ಗಮನಕ್ಕೆ ತಂದರು. ಪರೀಕ್ಷಾ ಸಂಬಂಧ ತಗಲುವ ಖರ್ಚುವೆಚ್ಚಗಳನ್ನು ಸಂಬಂಧಿತ ಸಹಕಾರ ಸಂಘವು ಭರಿಸುವುದರಿಂದ ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊರೆ ಇಲ್ಲದಿರುವ ವಿಚಾರವನ್ನೂ ಸಭೆಗೆ ತಿಳಿಸಿದರು. ವಿಶ್ವವಿದ್ಯಾನಿಲಯದ ಸೇವಾ ಶುಲ್ಕವನ್ನು ಸಂಬಂಧಿತ ಸಹಕಾರ ಸಂಘದಿಂದ ಭರಿಸಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

## 1. ನಡವಳಿಗಳ ದೃಢೀಕರಣ

1. ದಿನಾಂಕ 18.06.2022ರಂದು ನಡೆದ ಸಿಂಡಿಕೇಟಿನ 2022ನೇ ಸಾಲಿನ ಐದನೇ ವಿಶೇಷ ಸಭೆಯ ನಡವಳಿಯ ದೃಢೀಕರಣ.

   ದಿನಾಂಕ 18.06.2022ರಂದು ನಡೆದ ಸಿಂಡಿಕೇಟಿನ 2022ನೇ ಸಾಲಿನ ಐದನೇ ವಿಶೇಷ ಸಭೆಯ ನಡವಳಿಯನ್ನು ಈ ಕೆಳಗಿನ ತಿದ್ದುಪಡಿಯೊಂದಿಗೆ ದೃಢೀಕರಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ವಿಸ.4:07(2022)

**ವಿಷಯ:** ವಿಶ್ವವಿದ್ಯಾನಿಲಯ ಸಂಧ್ಯಾ ಕಾಲೇಜು, ಮಂಗಳೂರು ಮತ್ತು ದೂರಶಿಕ್ಷಣ ಕೇಂದ್ರ ಮಂಗಳೂರು ಇಲ್ಲಿನ ಆರ್ಥಿಕ ವಿಷಯಗಳಿಗೆ ಸಂಬಂಧಿಸಿದ ಲೋಪ ದೋಷಗಳ ಬಗ್ಗೆ ತನಿಖೆ ನಡೆಸಲು ಎ.ಸಿ.ಬಿ.ಗೆ ನೀಡುವ ದೂರು ಪತ್ರದ ಕರಡು ಅನುಮೋದನೆ ಕುರಿತು.

**ತಿದ್ದುಪಡಿ ನಿರ್ಣಯ:** ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಲಭ್ಯ ದಾಖಲೆಗಳನ್ನು ಪರಿಶೀಲಿಸಿದಾಗ ಮೇಲ್ನೋಟಕ್ಕೆ ಶ್ರೀ ನವೀನ್ ಇವರು ಹಣದ ದುರುಪಯೋಗ ನಡೆಸಿರುವುದು ಕಂಡುಬರುತ್ತದೆ. ಆದರೆ, ಸಂಬಂಧಿತ ಅಧಿಕಾರಿಗಳು ಆಡಳಿತ ಸಂಬಂಧ ನಿರ್ಲಕ್ಷ್ಯ ವಹಿಸಿ ಕರ್ತವ್ಯಲೋಪ ಎಸಗಿರುವುದು ಕಂಡುಬಂದಿರುವುದರಿಂದ ಸದರಿ ಅವಧಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಂಬಂಧಿತ ಅಧಿಕಾರಿಗಳಿಂದ ವಿಶ್ವವಿದ್ಯಾನಿಲಯಕ್ಕೆ ಉಂಟಾದ ಆರ್ಥಿಕ ನಷ್ಟವನ್ನು ನಿಗದಿಪಡಿಸಿದ ನಂತರ ಸದರಿ ಮೊತ್ತವನ್ನು ಮರುಭರಣೆ ಮಾಡಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ವಿಸ.5:12(2022)

**ವಿಷಯ:** ಡಾ. ಎಸ್. ತಿಪ್ಪೇಸ್ವಾಮಿ ಇವರು ಮಾನ್ಯ ಕರ್ನಾಟಕ ರಾಜ್ಯ ಉಚ್ಛ ನ್ಯಾಯಾಲಯದಲ್ಲಿ ಹೂಡಿರುವ ರಿಟ್ ಅರ್ಜಿ ಸಂಖ್ಯೆ 1318/2016 (ಪಿಐಎಲ್) ಜಿಎಂ(ಆರ್‌ಇಎಸ್) – ಸೇವಾ ದೃಢೀಕರಣ ನೀಡುವ ಬಗ್ಗೆ.

**ತಿದ್ದುಪಡಿ ನಿರ್ಣಯ:** ಪ್ರಕರಣಕ್ಕೆ ಸಂಬಂಧಿಸಿದ ಸಮಗ್ರ ದಾಖಲೆಗಳನ್ನು ಮತ್ತು ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿರುವ ರಿಟ್ ಅರ್ಜಿ ಸಂಖ್ಯೆ 1318/2016 (ಪಿಐಎಲ್) ಜಿಎಂ(ಆರ್‌ಇಎಸ್) ರ ಅರ್ಜಿಗಳು, ಲಿಖಿತ ಆಕ್ಷೇಪಗಳು ಮತ್ತು ಹಾಜರುಪಡಿಸಿದ ದಾಖಲೆಗಳನ್ನು ಸಹ ಸಭೆಯಲ್ಲಿ ವಿಸ್ತೃತವಾಗಿ ಪರಿಶೀಲಿಸಲಾಯಿತು. ಪ್ರಸ್ತಾಪಿತ ಪಿಐಎಲ್ ನಲ್ಲಿ ಪ್ರಸ್ತಾಪಿಸಿರುವ ಎಲ್ಲಾ ಪ್ರಾಧ್ಯಾಪಕರುಗಳ ಮೇಲೆ ಸುಳ್ಳು ಹಾಗೂ

ಆಧಾರರಹಿತ ಆರೋಪ ಮಾಡಿ ಅರ್ಜಿ ಸಲ್ಲಿಸಿದ ಪ್ರೊ. ತಿಪ್ಪೇಸ್ವಾಮಿಯವರ ವಿರುದ್ಧ ನ್ಯಾಯಾಂಗ ನಿಂದನೆ ಮತ್ತು ಮಾನಹಾನಿ ಪ್ರಕರಣ ದಾಖಲಿಸಲು ಹಾಗೂ ಸೂಕ್ತ ಕಾನೂನು ಕ್ರಮಕ್ಕೈಗೊಳ್ಳಲು ಸಹ ಸಿಂಡಿಕೇಟು ನಿರ್ಣಯಿಸಿತು.

ಮುಂದುವರಿದು, ಅರ್ಜಿಯಲ್ಲಿ ನಮೂದಿಸಿರುವ ಶಿಕ್ಷಕರುಗಳಿಗೆ ವಿಶ್ವವಿದ್ಯಾನಿಲಯದಿಂದ ಸೇವಾ ದೃಢೀಕರಣ ಹಾಗೂ ಯಾವುದೇ ರೀತಿಯ ಗೌಪ್ಯತಾ ವರದಿ ಹಾಗೂ ಇನ್ನಿತರ ವರದಿಗಳನ್ನು ನೀಡುವುದಕ್ಕೆ ಈ ಪಿಐಎಲ್‌ನ್ನು ಪರಿಗಣಿಸುವುದು ಅಪ್ರಸ್ತುತ ಮತ್ತು ಅನಗತ್ಯ ಎಂದು ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ವಿಸ.5:13(2022)

**ವಿಷಯ:** ಡಾ. ಎಸ್. ತಿಪ್ಪೇಸ್ವಾಮಿ ಇವರು ಮಾನ್ಯ ಕರ್ನಾಟಕ ರಾಜ್ಯ ಉಚ್ಛ ನ್ಯಾಯಾಲಯದಲ್ಲಿ ಹೂಡಿರುವ ರಿಟ್ ಅರ್ಜಿ ಸಂಖ್ಯೆ 31446/2015 ಜಿಎಂ(ಆರ್‌ಇಎಸ್) – ಸೇವಾ ದೃಢೀಕರಣ ನೀಡುವ ಬಗ್ಗೆ.

**ತಿದ್ದುಪಡಿ ನಿರ್ಣಯ:** ಪ್ರಕರಣಕ್ಕೆ ಸಂಬಂಧಿಸಿದ ಸಮಗ್ರ ದಾಖಲೆಗಳನ್ನು ಮತ್ತು ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿರುವ ರಿಟ್ ಅರ್ಜಿ ಸಂಖ್ಯೆ 31446/2015 ಜಿಎಂ(ಆರ್‌ಇಎಸ್)ರ ಅರ್ಜಿಗಳು, ಲಿಖಿತ ಆಕ್ಷೇಪಗಳು ಮತ್ತು ಹಾಜರುಪಡಿಸಿದ ದಾಖಲೆಗಳನ್ನು ಸಹ ಸಭೆಯಲ್ಲಿ ವಿಸ್ತೃತವಾಗಿ ಪರಿಶೀಲಿಸಲಾಯಿತು. ಪ್ರಸ್ತಾಪಿತ ರಿಟ್ ಅರ್ಜಿಯಲ್ಲಿ ಪ್ರಸ್ತಾಪಿಸಿರುವ ಎಲ್ಲಾ ಪ್ರಾಧ್ಯಾಪಕರುಗಳ ಮೇಲೆ ಸುಳ್ಳು ಹಾಗೂ ಆಧಾರರಹಿತ ಆರೋಪ ಮಾಡಿ ಅರ್ಜಿ ಸಲ್ಲಿಸಿದ ಪ್ರೊ. ತಿಪ್ಪೇಸ್ವಾಮಿಯವರ ವಿರುದ್ಧ ನ್ಯಾಯಾಂಗ ನಿಂದನೆ ಮತ್ತು ಮಾನಹಾನಿ ಪ್ರಕರಣ ದಾಖಲಿಸಲು ಹಾಗೂ ಸೂಕ್ತ ಕಾನೂನು ಕ್ರಮಕ್ಕೈಗೊಳ್ಳಲು ಸಹ ಸಿಂಡಿಕೇಟು ನಿರ್ಣಯಿಸಿತು.

ಮುಂದುವರಿದು, ಅರ್ಜಿಯಲ್ಲಿ ನಮೂದಿಸಿರುವ ಶಿಕ್ಷಕರುಗಳಿಗೆ ವಿಶ್ವವಿದ್ಯಾನಿಲಯದಿಂದ ಸೇವಾ ದೃಢೀಕರಣ ಹಾಗೂ ಯಾವುದೇ ರೀತಿಯ ಗೌಪ್ಯತಾ ವರದಿ ಹಾಗೂ ಇನ್ನಿತರ ವರದಿಗಳನ್ನು ನೀಡುವುದಕ್ಕೆ ಈ ರಿಟ್ ಅರ್ಜಿಯನ್ನು ಪರಿಗಣಿಸುವುದು ಅಪ್ರಸ್ತುತ ಮತ್ತು ಅನಗತ್ಯ ಎಂದು ಸಿಂಡಿಕೇಟು ನಿರ್ಣಯಿಸಿತು.

## 2. ಅನುಸರಣಾ ವರದಿಯ ಅನುಮೋದನೆ

1. ದಿನಾಂಕ 29.03.2022ರಂದು ನಡೆದ ಸಿಂಡಿಕೇಟಿನ 2022ನೇ ಸಾಲಿನ ತೃತೀಯ ಸಾಮಾನ್ಯ ಸಭೆಯ ನಿರ್ಣಯದ ಮೇಲೆ ತೆಗೆದುಕೊಂಡ ಕ್ರಮದ ಅನುಸರಣಾ ವರದಿಯ ಅನುಮೋದನೆ.

   **– ಅನುಮೋದಿಸಲಾಯಿತು. –**

2. ದಿನಾಂಕ 13.04.2022ರಂದು ನಡೆದ ಸಿಂಡಿಕೇಟಿನ 2022ನೇ ಸಾಲಿನ ದ್ವಿತೀಯ ವಿಶೇಷ ಸಭೆಯ ನಿರ್ಣಯದ ಮೇಲೆ ತೆಗೆದುಕೊಂಡ ಕ್ರಮದ ಅನುಸರಣಾ ವರದಿಯ ಅನುಮೋದನೆ.

   ಅನುಸರಣಾ ವರದಿಯ ಕ್ರಮ ಸಂಖ್ಯೆ 10 ರಲ್ಲಿ ನಮೂದಿಸಿರುವ ಅನುಸರಣಾ ವರದಿಯು ಸಿಂಡಿಕೇಟು ಕೈಗೊಂಡಿರುವ ನಿರ್ಣಯವನ್ನು ಅನುಷ್ಠಾನ ಮಾಡಲು ಸದಸ್ಯ ಕಾರ್ಯದರ್ಶಿಯವರು ವಿಫಲರಾಗಿರುವ ಬಗ್ಗೆ ಸುದೀರ್ಘವಾಗಿ ಚರ್ಚಿಸಲಾಯಿತು. ಸದರಿ ವೈಫಲ್ಯವನ್ನು ಸಿಂಡಿಕೇಟು ಸಭೆಯು ಗಂಭೀರವಾಗಿ ಪರಿಗಣಿಸಿದ್ದು, ಇಂತಹ ವೈಫಲ್ಯತೆಯನ್ನು ಖಂಡಿಸಿರುವುದಲ್ಲದೆ ಪುನರಾವರ್ತನೆಯಾಗದಂತೆ ಎಚ್ಚರಿಕೆಯನ್ನು ನೀಡಿತು. ಸದರಿ ನಿರ್ಣಯವನ್ನು ಕೈಗೊಂಡ ದಿನಾಂಕದಿಂದಲೇ ಅನ್ವಯವಾಗುವಂತೆ

ದಿನಾಂಕ 26.07.2022ರಂದೇ ಜಾರಿಗೆ ಬರುವಂತೆ ಕ್ರಮಕೈಗೊಳ್ಳಬೇಕೆಂದು ಸದಸ್ಯ ಕಾರ್ಯದರ್ಶಿ (ಕುಲಸಚಿವರು)ಯವರಿಗೆ ಕಾಲಮಿತಿ ನಿಗದಿಗೊಳಿಸಿ, ನಿರ್ದೇಶನ ನೀಡಲಾಯಿತು. ತದನಂತರ ದಿನಾಂಕ 27.02.2022ರಂದು ಕೈಗೊಂಡ ಕ್ರಮವನ್ನು ಮಿಂಚಂಚೆ ಮೂಲಕ ಸದಸ್ಯರುಗಳಿಗೆ ರವಾನಿಸಬೇಕೆಂದು ನಿರ್ಣಯಿಸಲಾಯಿತು. ಈ ಕುರಿತು ಸಿಂಡಿಕೇಟು ಈ ಹಿಂದೆ ಕೈಗೊಂಡ ನಿರ್ಣಯಕ್ಕೆ ವಿರುದ್ಧವಾಗಿ ಗೌರವಧನ ಪಾವತಿಯಾಗಿದ್ದಲ್ಲಿ ವಿವರಗಳನ್ನು ಮುಂದಿನ ಸಿಂಡಿಕೇಟು ಸಭೆಗೆ ನೀಡಲು ಹಣಕಾಸು ಅಧಿಕಾರಿಗಳಿಗೆ ಸೂಚಿಸಲಾಯಿತು.

3. ದಿನಾಂಕ 22.04.2022ರಂದು ನಡೆದ ಸಿಂಡಿಕೇಟಿನ 2022ನೇ ಸಾಲಿನ ತೃತೀಯ ವಿಶೇಷ ಸಭೆಯ ನಿರ್ಣಯದ ಮೇಲೆ ತೆಗೆದುಕೊಂಡ ಕ್ರಮದ ಅನುಸರಣಾ ವರದಿಯ ಅನುಮೋದನೆ.

   ದಿನಾಂಕ 22.04.2022ರಂದು ನಡೆದ ಸಿಂಡಿಕೇಟಿನ 2022ನೇ ಸಾಲಿನ ತೃತೀಯ ವಿಶೇಷ ಸಭೆಯಲ್ಲಿ ಇತರ ವಿಷಯಗಳ ಕ್ರಮಸಂಖ್ಯೆ 2 ರಲ್ಲಿ ಕೈಗೊಂಡ ನಿರ್ಣಯದಂತೆ Result Analysis and progess ಬಗ್ಗೆ ಕಾರ್ಯಸೂಚಿಯನ್ನು ಮಂಡಿಸದಿರುವ ಬಗ್ಗೆ ಸಿಂಡಿಕೇಟು ತನ್ನ ಅಸಮಾಧಾನವನ್ನು ವ್ಯಕ್ತಪಡಿಸಿತು. ಆದರೆ, ಲಗತ್ತಿಸಿರುವ Result Analysis ತಃಖ್ತೆಯನ್ನು ಸಿಂಡಿಕೇಟು ಪರಿಶೀಲಿಸಿತು. ಮಂಗಳೂರು ವಿಶ್ವವಿದ್ಯಾನಿಲಯದ 2020–21ನೇ ಸಾಲಿನ ಫಲಿತಾಂಶದ ಬಗ್ಗೆ ಸಿಂಡಿಕೇಟು ತನ್ನ ಅಸಮಾಧಾನವನ್ನು ವ್ಯಕ್ತಪಡಿಸಿತು. ಈ ಬಗ್ಗೆ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಚರ್ಚಿಸಬೇಕೆಂಬುದಾಗಿಯೂ ಸಿಂಡಿಕೇಟು ನಿರ್ಣಯಿಸಿತು.

   ಮಂಗಳೂರು ವಿಶ್ವವಿದ್ಯಾನಿಲಯದ ಸಂಯೋಜನೆಗೊಳಪಟ್ಟ ಎಲ್ಲಾ ಪದವಿ ಕಾಲೇಜುಗಳು ಫಲಿತಾಂಶ ಪ್ರಕಟಣೆಯ ಒಂದು ತಿಂಗಳ ಒಳಗಾಗಿ ತಮ್ಮ ಕಾಲೇಜುಗಳ ಫಲಿತಾಂಶ ತಃಖ್ತೆಯನ್ನು ವಿಶ್ವವಿದ್ಯಾನಿಲಯಕ್ಕೆ ಕಡ್ಡಾಯವಾಗಿ ಸಲ್ಲಿಸಬೇಕೆಂಬುದಾಗಿಯೂ ಸಿಂಡಿಕೇಟು ನಿರ್ಣಯಿಸಿತು.

4. ದಿನಾಂಕ 16.05.2022ರಂದು ನಡೆದ ಸಿಂಡಿಕೇಟಿನ 2022ನೇ ಸಾಲಿನ ಚತುರ್ಥ ಸಾಮಾನ್ಯ ಸಭೆಯ ನಿರ್ಣಯದ ಮೇಲೆ ತೆಗೆದುಕೊಂಡ ಕ್ರಮದ ಅನುಸರಣಾ ವರದಿಯ ಅನುಮೋದನೆ.

**– ಅನುಮೋದಿಸಲಾಯಿತು. –**

## I. ಈ ಸಿಂಡಿಕೇಟು ಸಭೆಗೆ ಮಂಡಿಸಿರುವ ಕಾರ್ಯಸೂಚಿಗಳು:

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು:ಸಾಸ.5:01(2022)

**ವಿಷಯ:** ಸ್ನಾತಕೋತ್ತರ ಜಿಯೋಇನ್‌ಫಾರ್ಮೆಟಿಕ್ಸ್ ಅಧ್ಯಯನ ಮಂಡಳಿಯ ಪುನರ್‌ರಚನೆಯ ಬಗ್ಗೆ.

**ನಿರ್ಣಯ:** ಸ್ನಾತಕೋತ್ತರ ಜಿಯೋಇನ್‌ಫಾರ್ಮೆಟಿಕ್ಸ್ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ:ಸಾಸ.5:02(022)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಎ, ಬಿ, ಮತ್ತು ಸಿ ಮಾದರಿ ವಸತಿಗೃಹಗಳ ವಸ್ತು ಸ್ಥಿತಿಯ ಬಗ್ಗೆ.

**ನಿರ್ಣಯ:** ವಸತಿಗೃಹಗಳ ವರದಿಯನ್ನು ಸಿಂಡಿಕೇಟು ಪರಿಶೀಲಿಸಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾಸ.5:03(2022)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರಯೋಗಾಲಯ ಸಹಾಯಕರ ವೇತನ ಶ್ರೇಣಿಯನ್ನು ನೇಮಕಾತಿಯ ಕನಿಷ್ಠ ವಿದ್ಯಾರ್ಹತೆಯಲ್ಲಿ ಏಕರೂಪವಿರುವ ಹುದ್ದೆಗಳ ವೇತನ ಶ್ರೇಣಿಗೆ ಸಮಾನಾಗಿಸುವ ಬಗ್ಗೆ.

**ನಿರ್ಣಯ:** ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾಸ.5:04(2022)

**ವಿಷಯ:** ಶ್ರೀಮತಿ ಶ್ಯಾಮಲ, ಶೀಘ್ರಲಿಪಿಗಾರರು, ಕುಲಪತಿಯವರ ಕಾರ್ಯಾಲಯ ಇವರಿಗೆ ವಿಶ್ವವಿದ್ಯಾನಿಲಯದ ಸೇವೆಯಿಂದ ಸ್ವಯಂ ನಿವೃತ್ತಿ ಹೊಂದಲು ಅನುಮತಿ ನೀಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ:ಸಾಸ.5:05(2022)

**ವಿಷಯ:** ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರಿನ ಆವರಣದಲ್ಲಿ ಹಳೆ ವಿದ್ಯಾರ್ಥಿ ಸಂಘದ ವತಿಯಿಂದ ಕೊಡಮಾಡಿರುವ ಕಾಮಗಾರಿಗೆ ಸಂಬಂಧಿಸಿದ ಕೊರತೆ ಮೊತ್ತ ಭರಿಸಿಕೊಡಲು ಕಾಲೇಜಿನ 150ನೇ ವರ್ಷಾಚರಣೆಯಲ್ಲಿ ಸಂಗ್ರಹಿಸಲಾದ ಉಳಿಕೆ ಮೊತ್ತದಿಂದ ಪಾವತಿಸಲು ಮಂಜೂರಾತಿ ನೀಡುವ ಪ್ರಸ್ತಾವನೆ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಸುಧೀರ್ಘವಾಗಿ ಚರ್ಚಿಸಲಾಯಿತು. ಕಾಮಗಾರಿಯನ್ನು ಪ್ರಾರಂಭಿಸುವಾಗ ವಿಶ್ವವಿದ್ಯಾನಿಲಯದಿಂದ ಅನುಮತಿಯನ್ನು ಪಡೆಯದಿರುವ ಬಗ್ಗೆ ಚರ್ಚಿಸಲಾಗಿ, ಇನ್ನು ಮುಂದೆ ಇಂತಹ ತಪ್ಪುಗಳು ಮರುಕಳಿಸದಂತೆ ಪ್ರಾಂಶುಪಾಲರಿಗೆ ತಿಳುವಳಿಕೆ ಪತ್ರ ನೀಡಲು ನಿರ್ಣಯಿಸಿ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ:ಸಾಸ.5:06(2022)

**ವಿಷಯ:** 2020–21 ನೇ ಸಾಲಿನ ಪಂಚಾಯತ್ ತೆರಿಗೆ ಪಾವತಿಸಿರುವ ಕುರಿತು.

**ನಿರ್ಣಯ:** ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾಸ.5:07(2022)

**ವಿಷಯ:** ಡಾ. ಅನು ಅಪ್ಪಯ್ಯ, ಕೆ. ಎ. ಪ್ರಧಾನ ವಿಜ್ಞಾನಿ (ನಿವೃತ್ತ), CSIR – CFTRI, ಮೈಸೂರು ಇವರು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸೇವೆ ಸಲ್ಲಿಸಿದ ಅವಧಿಯ ಪಿಂಚಣಿ ವಂತಿಗೆಯನ್ನು – CFTRI, ಮೈಸೂರು ಇಲ್ಲಿಗೆ ವರ್ಗಾಯಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾಸ.5:08(2022)

**ವಿಷಯ:** ಪ್ರೊ. ವಿಶ್ವನಾಥ, ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಇವರ ನೇಮಕಾತಿಯಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳ ಬಗ್ಗೆ ಸರ್ಕಾರದ ಪತ್ರವನ್ನು ಸಿಂಡಿಕೇಟು ಸಭೆಯ ಗಮನಕ್ಕೆ ತರಲು ಆಗಿರುವ ವಿಳಂಬದ ಬಗ್ಗೆ ಪರಿಶೀಲಿಸಲು ರಚಿಸಿದ ಏಕ ಸದಸ್ಯ ಸಮಿತಿಯ ವರದಿಯನ್ನು ಸಿಂಡಿಕೇಟು

| | |
|---|---|
| | ಸಭೆಗೆ ಮಂಡಿಸುವ ಬಗ್ಗೆ. |
| **ನಿರ್ಣಯ:** | ದಿನಾಂಕ 06.05.2022ರಂದು ನಡೆದ ಏಕ ಸದಸ್ಯ ಸಮಿತಿಯು ಸಲ್ಲಿಸಿರುವ ಮುಚ್ಚಿದ ಲಕೋಟೆಯ ವರದಿಯನ್ನು ಸಿಂಡಿಕೇಟು ಸಭೆಯಲ್ಲಿ ತೆರೆಯಲಾಯಿತು. ವರದಿಯನ್ನು ಕುಲಸಚಿವರು ಸಭೆಗೆ ಮಂಡಿಸಿದರು. ವರದಿಯನ್ನು ಸಿಂಡಿಕೇಟು ಸರ್ವಾನುಮತದಿಂದ ಅಂಗೀಕರಿಸಿತು. |

| | |
|---|---|
| **ಕಾರ್ಯಸೂಚಿ ಸಂಖ್ಯೆ:** | ಪರೀಕ್ಷಾಂಗ:ಸಾಸ.5:09(2022) |
| **ವಿಷಯ:** | ಎಪ್ರಿಲ್/ಆಗಸ್ಟ್/ಅಕ್ಟೋಬರ್/ಡಿಸೆಂಬರ್ 2021ರಲ್ಲಿ ಜರುಗಿದ ವಿಶ್ವವಿದ್ಯಾನಿಲಯದ ವಿವಿಧ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ನಡೆಸಿದ ಅವ್ಯವಹಾರಗಳು – ದಂಡನೆಯನ್ನು ದೃಢಪಡಿಸುವ ಬಗ್ಗೆ. |
| **ನಿರ್ಣಯ:** | ಅನುಮೋದಿಸಲಾಯಿತು. |

| | |
|---|---|
| **ಕಾರ್ಯಸೂಚಿ ಸಂಖ್ಯೆ:** | ಎಸಿಸಿ:ಸಾಸ.5:10(2022) |
| **ವಿಷಯ:** | ಸಂತ ಅಲೋಶಿಯಸ್ ಕಾಲೇಜು (ಸ್ವಾಯತ್ತ), ಮಂಗಳೂರು ಇಲ್ಲಿ ಶೈಕ್ಷಣಿಕ ವರ್ಷ 2022–23ನೇ ಸಾಲಿನಿಂದ ಬಿ.ಸಿ.ಎ. ಕಾರ್ಯಕ್ರಮಕ್ಕೆ 80 ವಿದ್ಯಾರ್ಥಿ ಪರಿಮಿತಿಯೊಂದಿಗೆ ಹೆಚ್ಚುವರಿ ವಿಭಾಗಕ್ಕೆ ಅನುಮತಿ ನೀಡುವ ಬಗ್ಗೆ. |
| **ನಿರ್ಣಯ:** | ಅನುಮೋದಿಸಲಾಯಿತು. |

| | |
|---|---|
| **ಕಾರ್ಯಸೂಚಿ ಸಂಖ್ಯೆ:** | ಎಸಿಸಿ:ಸಾಸ.5:11(2022) |
| **ವಿಷಯ:** | ಸಂತ ಅಲೋಶಿಯಸ್ ಕಾಲೇಜು (ಸ್ವಾಯತ್ತ) ಮಂಗಳೂರು ಇಲ್ಲಿ ಃ.ಅಹು (Anticeship/Internship Embedded) ಮತ್ತು B.Sc. (Visual Communication) ಎಂಬ ಹೊಸ ಕಾರ್ಯಕ್ರಮಗಳನ್ನು ಪ್ರಾರಂಭಿಸುವ ಬಗ್ಗೆ. |
| **ನಿರ್ಣಯ:** | ಅನುಮೋದಿಸಲಾಯಿತು.<br>ಮುಂದುವರಿದು, ವಿಶ್ವವಿದ್ಯಾನಿಲಯದ ಎಲ್ಲಾ ಪ್ರಾಧಿಕಾರಗಳಲ್ಲಿ ಅನುಮೋದನೆಗೊಳ್ಳುವ ಮೊದಲು ಹೊಸ ಕಾರ್ಯಕ್ರಮಗಳ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿರುವುದು ಸಿಂಡಿಕೇಟು ಸದಸ್ಯರ ಗಮನಕ್ಕೆ ಬಂದಿದ್ದು, ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯದ ಹಿತದೃಷ್ಟಿಯಿಂದ ಮಾತ್ರ ಸಿಂಡಿಕೇಟು ಪ್ರಸ್ತಾವನೆಯನ್ನು ಅನುಮೋದಿಸಿರುತ್ತದೆ. ಆದರೆ, ಕಾಲೇಜಿನ ಈ ನಡವಳಿಕೆಯನ್ನು ಸಿಂಡಿಕೇಟು ಗಂಭೀರವಾಗಿ ಪರಿಗಣಿಸಿ, ಇನ್ನು ಮುಂದೆ ಈ ರೀತಿಯ ಪ್ರಕರಣಗಳು ಮರುಕಳಿಸದಂತೆ ಕಾಲೇಜಿನ ಪ್ರಾಂಶುಪಾಲರಿಗೆ ಎಚ್ಚರಿಕೆ ಪತ್ರ ನೀಡಬೇಕೆಂಬುದಾಗಿಯೂ ಸಿಂಡಿಕೇಟು ನಿರ್ಣಯಿಸಿತು. |

| | |
|---|---|
| **ಕಾರ್ಯಸೂಚಿ ಸಂಖ್ಯೆ:** | ಎಸಿಸಿ:ಸಾ.ಸ.5:12(2022) |
| **ವಿಷಯ:** | ಮಂಗಳೂರು ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳಲ್ಲಿ ನಡೆಸಲಾಗುವ ಸ್ನಾತಕೋತ್ತರ ಕಾರ್ಯಕ್ರಮಗಳನ್ನು ನಿಯಂತ್ರಿಸುವ ಪರಿನಿಯಮದ ತಿದ್ದುಪಡಿ ಅನುಮೋದನೆ ಬಗ್ಗೆ. |
| **ನಿರ್ಣಯ:** | ಅನುಮೋದಿಸಲಾಯಿತು. |

**ಕಾರ್ಯಸೂಚಿ ಸಂಖ್ಯೆ:** ಡಿಇವಿ:ಸಾಸ.5:13(2022)

**ವಿಷಯ:** SERB ಪ್ರಾಜೆಕ್ಟ್ ಸೂಕ್ಷ್ಮಾಣುಜೀವವಿಜ್ಞಾನ ವಿಭಾಗ – Rotary Evaporaor ಉಪಕರಣ ಖರೀದಿ ಬಗ್ಗೆ.

**ನಿರ್ಣಯ:** ದಿನಾಂಕ 15.06.2022ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ:ಸಾಸ.5:14(2022)

**ವಿಷಯ:** ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾನಿಲಯ – ಪಟ್ಟೋಲೆ ಪಳಮೆ ಎಂಬ ಪುಸ್ತಕವನ್ನು ಮುದ್ರಿಸುವ ಪ್ರಸ್ತಾವನೆ ಬಗ್ಗೆ.

**ನಿರ್ಣಯ:** ದಿನಾಂಕ 15.06.2022ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾಸ.5:15(2022)

**ವಿಷಯ:** ಡಾ. ಪಾರ್ವತಿ ಅಪ್ಪಯ್ಯ, ಸಿಂಡಿಕೇಟು ಸದಸ್ಯರು, ಮಂಗಳೂರು ವಿಶ್ವವಿದ್ಯಾನಿಲಯ ಇವರು ಸಲ್ಲಿಸಿದ ಪ್ರಸ್ತಾವನೆಗೆ ಸಂಬಂಧಿಸಿ ದಿನಾಂಕ 13.04.2022 ರ ಸಿಂಡಿಕೇಟು ಸಭೆಯ ಕಾರ್ಯಸೂಚಿ ಸಂಖ್ಯೆ ಸಿಂಡಿಕೇಟು:ವಿ.ಸ.2:12 (2022)ರ ನಿರ್ಣಯದಂತೆ ಘಟಕ ಕಾಲೇಜುಗಳ ಶಿಕ್ಷಕರುಗಳ ವರ್ಗಾವಣೆಗೆ ಸಂಬಂಧಿಸಿ ಸಮಗ್ರ ವರದಿಯೊಂದಿಗೆ ಸಿಂಡಿಕೇಟು ಸಭೆಗೆ ಪ್ರಸ್ತಾವನೆ.

**ನಿರ್ಣಯ:** ನ್ಯಾಕ್ ಮಾನ್ಯತಾ ಸಂಸ್ಥೆಯು ಶೀಘ್ರದಲ್ಲಿ ಕಾಲೇಜಿಗೆ ಭೇಟಿ ನೀಡಲಿರುವುದರಿಂದ ಯಥಾಸ್ಥಿತಿಯನ್ನು ಕಾಪಾಡುವಂತೆ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ:ಸಾಸ.5:16(2022)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿ 2022–23ನೇ ಸಾಲಿನಲ್ಲಿ ಅರಣ್ಯ ಇಲಾಖೆಯಿಂದ ಟ್ರೀ ಪಾರ್ಕ್ ನಿರ್ಮಾಣ ಮಾಡಲು ಜಮೀನು ಒದಗಿಸುವ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ತಾತ್ವಿಕವಾಗಿ ಅನುಮೋದಿಸಲಾಯಿತು. ಉಳಿದಂತೆ ನಿಯಮಾನುಸಾರ ಕ್ರಮಕೈಗೊಳ್ಳುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ:ಸಾಸ.5:17(2022)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಗ್ರಂಥಾಲಯಕ್ಕೆ Remote access facility Software ನ ಖರೀದಿ ಕುರಿತು ಟೆಂಡರ್ ಪ್ರಸ್ತಾವನೆ ಬಗ್ಗೆ.

**ನಿರ್ಣಯ:** ದಿನಾಂಕ 15.06.2022ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಮಂಗಳೂರು ವಿಶ್ವವಿದ್ಯಾನಿಲಯದ ಸಂಯೋಜನೆಕ್ಕೊಳಪಟ್ಟ ಎಲ್ಲಾ ಕಾಲೇಜುಗಳಿಗೆ ಈ ಸೌಲಭ್ಯವನ್ನು ವಿಸ್ತರಿಸಲು ಕ್ರಮ ಕೈಗೊಳ್ಳಬೇಕೆಂದು ಸಿಂಡಿಕೇಟು ನಿರ್ಣಯಿಸಿತು. ಸದರಿ Software ನ ಬಳಕೆಗಾಗಿ ಸರ್ಕಾರಿ ಕಾಲೇಜುಗಳಿಗೆ ರೂ.1,000.00(ರೂಪಾಯಿ ಒಂದು ಸಾವಿರ ಮಾತ್ರ) ಮತ್ತು ಇತರೇ ಕಾಲೇಜುಗಳಿಗೆ ರೂ.5,000.00 (ರೂಪಾಯಿ ಐದು ಸಾವಿರ ಮಾತ್ರ) ಶುಲ್ಕ ನಿಗದಿಪಡಿಸಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು. ಕಾಲೇಜುಗಳು ಸಾಫ್ಟ್‌ವೇರ್‌ನ ವಾರ್ಷಿಕ ಬಳಕೆಯ ವಿವರಗಳನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಬೇಕೆಂಬುದಾಗಿಯೂ ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ:ಸಾಸ.5:18(2022)
**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಪ್ರಸ್ತುತ ಇರುವ ಲಾಂಛನದಲ್ಲಿ ಬದಲಾವಣೆ / ತಿದ್ದುಪಡಿ ಮಾಡುವ ಬಗ್ಗೆ.
**ನಿರ್ಣಯ:** ಸರ್ಕಾರದ ಅನುಮೋದನೆಯನ್ನು ಪಡೆದುಕೊಂಡು ಲಾಂಛನದಲ್ಲಿ ಬದಲಾವಣೆ / ತಿದ್ದುಪಡಿ ಮಾಡಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ:ಸಾಸ.5:19(2022)
**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ Central Facility on IOT & Cloud Based System Lab ನಲ್ಲಿರುವ ಲ್ಯಾಪ್‌ಟಪ್‌ಗಳ ಬ್ಯಾಟರಿಗಳನ್ನು ಬದಲಾಯಿಸುವ ಹಾಗೂ
**ನಿರ್ಣಯ:** ದಿನಾಂಕ 15.06.2022ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ:ಸಾಸ.5:20(2022)
**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಕುಲಸಚಿವರ ಕಛೇರಿಗೆ ಅಗತ್ಯವಿರುವ 500 Ream A4 Size ಹಾಗೂ 500 Ream FS Size ಜೆರಾಕ್ಸ್ ಪೇಪರ್‌ಗಳನ್ನು ಖರೀದಿಸುವ ಬಗ್ಗೆ.
**ನಿರ್ಣಯ:** ದಿನಾಂಕ 15.06.2022ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ:ಸಾಸ.5:21(2022)
**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಕುಲಸಚಿವರ ಕಛೇರಿಗೆ ಅಗತ್ಯವಿರುವ 01 ಸಂಖ್ಯೆಯ ಜೆರಾಕ್ಸ್ ಯಂತ್ರವನ್ನು ಖರೀದಿಸುವ ಬಗ್ಗೆ.
**ನಿರ್ಣಯ:** ದಿನಾಂಕ 15.06.2022ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ:ಸಾಸ.5:22(2022)
**ವಿಷಯ:** ಮಂಗಳೂರು ವಿಶ್ವವಿಯಾನಿಲಯದ ಕ್ಯಾಂಪಸ್, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಹಾಗೂ ಜ್ಞಾನ ಕಾವೇರಿ ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರ ಇಲ್ಲಿರುವ ಸಿಸಿ ಕ್ಯಾಮಾರಗಳ ನಿರ್ವಹಣೆಗಾಗಿ ಬೇಕಾಗಿರುವ ಉಪಕರಣಗಳ ವೆಚ್ಚಗಳ ಖರೀದಿಗೆ ಮಂಜೂರಾತಿ ನೀಡುವ ಕುರಿತು.
**ನಿರ್ಣಯ:** ದಿನಾಂಕ 15.06.2022ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾಸ.5:23(2022)
**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಾದ ವಿಶ್ವವಿದ್ಯಾನಿಲಯ ಸಂಧ್ಯಾ ಕಾಲೇಜು, ಮಂಗಳೂರು, ವಿಶ್ವವಿದ್ಯಾನಿಲಯ ಪ್ರಥಮ ದರ್ಜೆ ಕಾಲೇಜು, ಮಂಗಳಗಂಗೋತ್ರಿ ಹಾಗೂ ವಿಶ್ವವಿದ್ಯಾನಿಲಯ ಪ್ರಥಮ ದರ್ಜೆ ಕಾಲೇಜು, ನೆಲ್ಯಾಡಿ ಇದರ ಸ್ಥಾಪನೆ ಹಾಗೂ ಹುದ್ದೆಗಳ ಸೃಜನೆ ಬಗ್ಗೆ ರಚಿಸಿದ ಕರಡು ಪರಿನಿಯಮಗಳನ್ನು ತಿದ್ದುಪಡಿ ಮಾಡಿ ಅನುಮೋದಿಸುವ ಬಗ್ಗೆ.
**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪರೀಕ್ಷಾಂಗ:ಸಾಸ.5:24(2022)
**ವಿಷಯ:** ಕೇಂದ್ರೀಯ ಮೌಲ್ಯಮಾಪನದ ದಿನಭತ್ಯೆ ಮತ್ತು ಸ್ಥಳೀಯ ಭತ್ಯೆಯನ್ನು 2022–23ನೇ ಸಾಲಿನಲ್ಲಿಯೂ ಪಾವತಿಸುವ ಬಗ್ಗೆ.
**ನಿರ್ಣಯ:** ಈ ಬಗ್ಗೆ ಈಗಾಗಲೇ ದಿನಾಂಕ 27.08.2021ರಂದು ನಡೆದ ಸಿಂಡಿಕೇಟು ಸಭೆಯ ಇತರ ವಿಷಯಗಳ ಕ್ರಮ ಸಂಖ್ಯೆ 7ರಲ್ಲಿ ನಿರ್ಣಯ ಕೈಗೊಂಡಿರುವುದರಿಂದ ಕಾರ್ಯಸೂಚಿಯನ್ನು ಹಿಂಪಡೆಯಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು:ಸಾಸ.5:25(2022)
**ವಿಷಯ:** ಸರ್ಕಾರದ ಸುತ್ತೋಲೆಯಲ್ಲಿಯ ಮಾರ್ಗಸೂಚಿಗಳನ್ನು ಪರಿನಿಯಮದಲ್ಲಿ ಅಳವಡಿಸುವ ಬಗ್ಗೆ.
**ನಿರ್ಣಯ:** ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಾರ್ವತ್ರಿಕ:ಸಾಸ.5:26(2022)
**ವಿಷಯ:** ಡಾ. ಉಮೇಶ್ ನಾಯ್ಕ್, ಸಹಾಯಕ ಪ್ರಾಧ್ಯಾಪಕರು, ಗ್ರಂಥಾಲಯ ಹಾಗೂ ಮಾಹಿತಿ ವಿಜ್ಞಾನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಇವರ ವಿರುದ್ಧ ವಿಭಾಗದ ವಿದ್ಯಾರ್ಥಿಗಳು ನೀಡಿರುವ ದೂರಿನ ಬಗ್ಗೆ.
**ನಿರ್ಣಯ:** ಆಂತರಿಕ ದೂರು ಸಮಿತಿಯು ದಿನಾಂಕ 06.06.2022ರಂದು ಸಭೆ ನಡೆಸಿ, ಮುಚ್ಚಿದ ಲಕೋಟೆಯಲ್ಲಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ವರದಿಯನ್ನು ಸಿಂಡಿಕೇಟು ಸಭೆಯಲ್ಲಿ ತೆರೆಯಲಾಯಿತು. ವರದಿಯನ್ನು ಕುಲಸಚಿವರು ಸಭೆಗೆ ಮಂಡಿಸಿದರು. ವರದಿಯನ್ನು ಸಿಂಡಿಕೇಟು ಸರ್ವಾನುಮತದಿಂದ ಅಂಗೀಕರಿಸಿ, ಆರೋಪದಿಂದ ಮುಕ್ತಗೊಳಿಸಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ:ಸಾಸ.5:27(2022)
**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ "Sri Ananthakrishna Gold Medal instituted by Mangala Alumni Association to Top Scorer in M.Sc. Mathematics" ಚಿನ್ನದ ಪದಕ ಪ್ರದಾನ ಮಾಡುವ ಬಗ್ಗೆ.
**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ:ಸಾಸ.5:28(2022)
**ವಿಷಯ:** ಸರೋಶ್ ಇನ್ಸ್ಟಿಟ್ಯೂಟ್ ಆಫ್ ಹೊಟೇಲ್ ಅಡ್ಮಿನಿಸ್ಟ್ರೇಶನ್ ಹಾಗೂ ನಿಟ್ಟೆ ಇನ್‌ಸ್ಟಿಟ್ಯೂಟ್ ಆಫ್ ಟೂರಿಸಂ ಆಂಡ್ ಹಾಸ್ಪಿಟಾಲಿಟಿ ಸ್ಟಡೀಸ್ ಈ ವಿದ್ಯಾಸಂಸ್ಥೆಗಳು ಶೈಕ್ಷಣಿಕ ವರ್ಷ 2022–23ನೇ ಸಾಲಿನಿಂದ ಸಂಯೋಜನೆ ಮುಂದುವರಿಸದೇ ಇರುವ ಬಗ್ಗೆ.
**ನಿರ್ಣಯ:** ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ:ಸಾಸ.5:29(2022)
**ವಿಷಯ:** ವಿಶ್ವವಿದ್ಯಾನಿಲಯ ಕಾಲೇಜು, ಬನ್ನಡ್ಕ ಇಲ್ಲಿ ಬಿ.ಎ. ಕಾರ್ಯಕ್ರಮವನ್ನು ಪ್ರಾರಂಭಿಸುವ ಬಗ್ಗೆ.
**ನಿರ್ಣಯ:** ನಿಯಮಾನುಸಾರವಾಗಿ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

| | |
|---|---|
| **ಕಾರ್ಯಸೂಚಿ ಸಂಖ್ಯೆ:** | ಎಸಿಸಿ:ಸಾಸ.5:30(2022) |
| **ವಿಷಯ:** | ವಿಶ್ವವಿದ್ಯಾನಿಲಯ ಕಾಲೇಜು, ನೆಲ್ಯಾಡಿಯಲ್ಲಿ ಶೈಕ್ಷಣಿಕ ವರ್ಷ 2022–23ನೇ ಸಾಲಿನಿಂದ ಬಿ.ಬಿ.ಎ. ಕಾರ್ಯಕ್ರಮವನ್ನು ಪ್ರಾರಂಭಿಸುವ ಬಗ್ಗೆ. |
| **ನಿರ್ಣಯ:** | ನಿಯಮಾನುಸಾರವಾಗಿ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು. |

| | |
|---|---|
| **ಕಾರ್ಯಸೂಚಿ ಸಂಖ್ಯೆ:** | ಹಣಕಾಸು:ಸಾಸ.5:31(2022) |
| **ವಿಷಯ:** | ಮಂಗಳೂರು ವಿಶ್ವವಿದ್ಯಾನಿಲಯದ 2017–18ನೇ ಸಾಲಿನ ಲೆಕ್ಕಪರಿಶೋಧನ ವರದಿ–ಅನುಸರಣಾ ವರದಿಯ ಅನುಮೋದನೆ ಕುರಿತು. |
| **ನಿರ್ಣಯ:** | ಅನುಮೋದಿಸಲಾಯಿತು. |

| | |
|---|---|
| **ಕಾರ್ಯಸೂಚಿ ಸಂಖ್ಯೆ:** | ಡಿಇವಿ:ಸಾಸ.5:32(2022) |
| **ವಿಷಯ:** | ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾನಿಲಯ – ಪಠ್ಯಪುಸ್ತಕಗಳನ್ನು ಮುದ್ರಿಸುವ ಪ್ರಸ್ತಾವನೆ ಬಗ್ಗೆ. |
| **ನಿರ್ಣಯ:** | ಅನುಮೋದಿಸಲಾಯಿತು. |

| | |
|---|---|
| **ಕಾರ್ಯಸೂಚಿ ಸಂಖ್ಯೆ:** | ಪರೀಕ್ಷಾಂಗ:ಸಾಸ.5:33(2022) |
| **ವಿಷಯ:** | ಪರೀಕ್ಷಾಂಗ ಕಛೇರಿಯ ಖರೀದಿ ಪ್ರಕ್ರಿಯೆಗಾಗಿ E-tender Portal ಗೆ ಪರ್ಯಾಯವಾಗಿ Gem Portal ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲು ಅನುಮೋದನೆ ಬಗ್ಗೆ. |
| **ನಿರ್ಣಯ:** | ಅನುಮೋದಿಸಲಾಯಿತು. ಮುಂದುವರಿದು, ಅಗತ್ಯಕ್ಕನುಗುಣವಾಗಿ Gem Portal ವ್ಯವಸ್ಥೆಯನ್ನು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಅಳವಡಿಸಿಕೊಳ್ಳಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು. |

| | |
|---|---|
| **ಕಾರ್ಯಸೂಚಿ ಸಂಖ್ಯೆ:** | ಸಿಂಡಿಕೇಟು:ಸಾಸ.5:34(2022) |
| **ವಿಷಯ:** | ಸ್ನಾತಕೋತ್ತರ ಕೇಂದ್ರ, ಜ್ಞಾನಕಾವೇರಿ ಕ್ಯಾಂಪಸ್, ಕುಶಾಲನಗರ, ಕೊಡಗು ಇಲ್ಲಿಯ ಸೂಕ್ಷ್ಮಾಣು ಜೀವವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಅಧ್ಯಕ್ಷರ ನೇಮಕಾತಿ ಬಗ್ಗೆ. |
| **ನಿರ್ಣಯ:** | ಮುಂದೂಡಲಾಯಿತು. |

| | |
|---|---|
| **ಕಾರ್ಯಸೂಚಿ ಸಂಖ್ಯೆ:** | ಡಿಇವಿ:ಸಾಸ.5:35(2022) |
| **ವಿಷಯ:** | ಮಂಗಳೂರು ವಿಶ್ವವಿದ್ಯಾನಿಲಯದ ಮತ್ತು ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರದ ವಿವಿಧ ಸ್ನಾತಕೋತ್ತರ ವಿಭಾಗ/ಕೋರ್ಸುಗಳಿಗೆ Adjunct Faculty ಗಳ ನೇಮಕಾತಿ ಬಗ್ಗೆ. |
| **ನಿರ್ಣಯ:** | ಅನುಮೋದಿಸಲಾಯಿತು. ಮುಂದುವರಿದು, Adjunct Faculty ಗಳ ಸೇವೆಯನ್ನು ಯುಜಿಸಿ ಮಾರ್ಗಸೂಚಿಯಂತೆ ತಿಂಗಳಿಗೆ ನಾಲ್ಕು ಗಂಟೆಗಳಿಗೆ ಮಾತ್ರ ಸೀಮಿತಗೊಳಿಸುವಂತೆ ನಿರ್ಣಯಿಸಲಾಯಿತು. |

| | |
|---|---|
| **ಕಾರ್ಯಸೂಚಿ ಸಂಖ್ಯೆ:** | ಪರೀಕ್ಷಾಂಗ:ಸಾಸ.5:36(2022) |
| **ವಿಷಯ:** | ಮಂಗಳೂರು ವಿಶ್ವವಿದ್ಯಾನಿಲಯದ ವಾರ್ಷಿಕ ಘಟಿಕೋತ್ಸವದಲ್ಲಿ ಪ್ರದಾನ ಮಾಡುವ ಚಿನ್ನದ ಪದಕದ ಬಗ್ಗೆ ವರದಿ. |
| **ನಿರ್ಣಯ:** | ಘಟನೋತ್ತರವಾಗಿ ಅನುಮೋದಿಸಲಾಯಿತು. |

**ಕಾರ್ಯಸೂಚಿ ಸಂಖ್ಯೆ:** ಪ.ಜಾ.ಪ.ಪಂ.ಘಟಕ:ಸಾಸ.5:37(2022)

**ವಿಷಯ:** ಶ್ರೀ ಚೇತನ್ ಜಿ., ಸಂಶೋಧನಾ ವಿದ್ಯಾರ್ಥಿ, ಭೌತಶಾಸ್ತ್ರ ವಿಭಾಗ, ಇವರಿಗೆ ವಿದೇಶದಲ್ಲಿ ನಡೆಯುವ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಸಂಶೋಧನಾ ಪತ್ರಿಕೆಯನ್ನು ಮಂಡಿಸಲು ಅನುಮತಿ ಹಾಗೂ ತತ್ಸಂಬಂಧ ತಗಲುವ ಆರ್ಥಿಕ ಸಹಾಯಧನ ನೀಡುವ ಬಗ್ಗೆ.

**ನಿರ್ಣಯ:** ಶ್ರೀ ಚೇತನ್ ಜಿ., ಸಂಶೋಧನಾ ವಿದ್ಯಾರ್ಥಿ, ಭೌತಶಾಸ್ತ್ರ ವಿಭಾಗ, ಇವರಿಗೆ ರೂ.1,66,164.00 (ರೂಪಾಯಿ ಒಂದು ಲಕ್ಷದ ಅರವತ್ತಾರು ಸಾವಿರದ ಒಂದು ನೂರ ಅರವತ್ತನಾಲ್ಕು ಮಾತ್ರ)ದ ಸಹಾಯಧನವನ್ನು ಮಂಜೂರು ಮಾಡುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾಸ.5:38(2022)

**ವಿಷಯ:** ಡಾ. ಬೃಂದಾ ವೀರಪ್ಪ, ಸಹ ಪ್ರಾಧ್ಯಾಪಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸೇವೆ ಸಲ್ಲಿಸಿದ ಅವಧಿಯ ಪಿಂಚಣಿ ವಂತಿಗೆ ಹಾಗೂ ನಿವೃತ್ತಿ ಉಪದಾನದ ಅಂಶದಾನವನ್ನು ತುಮಕೂರು ವಿಶ್ವವಿದ್ಯಾನಿಲಯಕ್ಕೆ ವರ್ಗಾಯಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ:ಸಾಸ.5:39(2022)

**ವಿಷಯ:** ಹಿಜಾಬ್ ಪ್ರಕರಣದಿಂದಾಗಿ ಪರೀಕ್ಷೆಗೆ ಗೈರು ಹಾಜರಾದ ವಿದ್ಯಾರ್ಥಿಗಳ ಪ್ರವೇಶಾತಿ / ವರ್ಗಾವಣಾ ಪ್ರವೇಶಾತಿ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪರೀಕ್ಷಾಂಗ:ಸಾಸ.5:40(2022)

**ವಿಷಯ:** ಬಟ್ಟೆ ಚೀಲ ಹೊಲಿಯಲು ಬೇಕಾದ ಕೋರಾ ಬಟ್ಟೆ ಖರೀದಿ ಬಗ್ಗೆ.

**ನಿರ್ಣಯ:** ಕೋರಾ ಬಟ್ಟೆ ಖರೀದಿಸಲು ತಗಲುವ ವೆಚ್ಚ ರೂ.22,05,000.00 (ರೂಪಾಯಿ ಇಪ್ಪತ್ತೆರಡು ಲಕ್ಷದ ಐದು ಸಾವಿರ ಮಾತ್ರ)ವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾಸ.5:41(2022)

**ವಿಷಯ:** ಶ್ರೀಮತಿ ದುಲ್ಸಿನ್ ಮೊಂತೆರೋ, ಸ್ವೀಪರ್–ಕಂ–ಕ್ಲೀನರ್, ಕಾರ್ಯಕಾರಿ ಅಭಿಯಂತರರ ಕಛೇರಿ, ಮಂಗಳೂರು ವಿಶ್ವವಿದ್ಯಾನಿಲಯ ಇವರಿಗೆ ವಿಶ್ವವಿದ್ಯಾನಿಲಯದ ಸೇವೆಯಿಂದ ಸ್ವಯಂ ನಿವೃತ್ತಿ ಹೊಂದಲು ಅನುಮತಿ ನೀಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾಸ.5:42(2022)

**ವಿಷಯ:** ಡಾ. ಚಂದ್ರಮ್ಮ ಎಂ., ಪ್ರಾಧ್ಯಾಪಕರು, ವಾಣಿಜ್ಯ ವಿಭಾಗ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ ಇವರು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸೇವೆ ಸಲ್ಲಿಸಿದ ಅವಧಿಯ ಪಿಂಚಣಿ ವಂತಿಗೆಯನ್ನು ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ ಇಲ್ಲಿಗೆ ವರ್ಗಾಯಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು:ಸಾಸ.5:43(2022)

**ವಿಷಯ:** ಶ್ರೀ ರಮೇಶ ಕೆ., ಸಿಂಡಿಕೇಟ್ ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆ – ವಿಶ್ವವಿದ್ಯಾನಿಲಯ ಮತ್ತು ಘಟಕ ಕಾಲೇಜಿನ ಅತಿಥಿ ಉಪನ್ಯಾಸಕರು ಹಾಗೂ ಶಿಕ್ಷಕೇತರ ಮಹಿಳಾ ನೌಕರರಿಗೆ ಮಾತೃತ್ವ (ಹೆರಿಗೆ) ರಜೆ ಸೌಲಭ್ಯವನ್ನು ನಮ್ಮ ವಿ.ವಿ.ಯಲ್ಲಿ ಜಾರಿಗೆ ತರುವ ಕುರಿತಂತೆ.

**ನಿರ್ಣಯ:** ಹೊರಗುತ್ತಿಗೆ ಆಧಾರದಲ್ಲಿರುವ ಮಹಿಳಾ ನೌಕರರಿಗೆ ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಆಇ 08 ಎಸ್ಆರ್ಎಸ್ 2022 ದಿನಾಂಕ 23.06.2022ರಂತೆ ಹೆರಿಗೆ ರಜೆ ಸೌಲಭ್ಯವನ್ನು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಜಾರಿಗೊಳಿಸಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

ಮುಂದುವರಿದು, ವಿಶ್ವವಿದ್ಯಾನಿಲಯದ ತಾತ್ಕಾಲಿಕ ಮತ್ತು ಅತಿಥಿ ಉಪನ್ಯಾಸಕರಿಗೆ 4 ತಿಂಗಳ ಹೆರಿಗೆ ರಜೆಯನ್ನು ಮಂಜೂರು ಮಾಡಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು:ಸಾಸ.5:44(2022)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಆಂಗ್ಲ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರ ನೇಮಕಾತಿ ಬಗ್ಗೆ.

**ನಿರ್ಣಯ:** ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಕಾನೂನು ಘಟಕ:ಸಾಸ.5:45(2022)

**ವಿಷಯ:** ಕರ್ನಾಟಕ ರಾಜ್ಯ ಉಚ್ಛ ನ್ಯಾಯಾಲಯದಲ್ಲಿ ಡಾ. ಅರಬಿ ಯು. ಪ್ರಾಧ್ಯಾಪಕರು ಅರ್ಥಶಾಸ್ತ್ರ ವಿಭಾಗ ಇವರು ಹೂಡಿರುವ ರಿಟ್ ಅರ್ಜಿ ಸಂಖ್ಯೆ:15070/2020 ಗೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯದ ಪರ ವಕೀಲರಾದ ಅರುಣ ಶ್ಯಾಂ ಅಸೋಸಿಯೇಟ್ಸ್ ಇವರು ಕಳುಹಿಸಿರುವ ಹಿರಿಯ ನ್ಯಾಯವಾದಿ ಶ್ರೀ ಅರುಣ ಶ್ಯಾಂ ಇವರ ಬಿಲ್ಲಿನ ಮೊತ್ತ ಪಾವತಿ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ:ಸಾಸ.5:46(2022)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಮೊಲೆಕ್ಯುಲರ್ ಬಯೋಲಜಿ (Molecular Biology) ಎಂಬ ಹೊಸ ಕಾರ್ಯಕ್ರಮವನ್ನು ಪ್ರಾರಂಭಿಸುವ ಪ್ರಸ್ತಾವನೆ ಅನುಮೋದನೆ ಬಗ್ಗೆ.

**ನಿರ್ಣಯ:** ಸಮಗ್ರ ಮಾಹಿತಿಯೊಂದಿಗೆ ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಬೇಕೆಂಬುದಾಗಿ ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ:ಸಾಸ.5:47(2022)

**ವಿಷಯ:** ಶೈಕ್ಷಣಿಕ ವರ್ಷ 2022–23ನೇ ಸಾಲಿನಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಆವರಣದ ಯೋಗವಿಜ್ಞಾನ ವಿಭಾಗದಲ್ಲಿ ಬಿ.ಎಸ್ಸಿ. ಯೋಗವಿಜ್ಞಾನ ಪದವಿ ಕಾರ್ಯಕ್ರಮವನ್ನು ಪ್ರಾರಂಭಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ:ಸಾಸ.5:48(2022)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ನಡೆಸಲ್ಪಡುವ ಎಂ.ಎಸ್ಸಿ. ಅನ್ವಯಿಕ ರಸಾಯನಶಾಸ್ತ್ರ ಕಾರ್ಯಕ್ರಮಕ್ಕೆ ಬದಲಾಗಿ ಎಂ.ಎಸ್ಸಿ. ಅನಾಲಿಟಿಕಲ್ ಕೆಮಿಸ್ಟ್ರಿ ಸ್ನಾತಕೋತ್ತರ ಕಾರ್ಯಕ್ರಮವನ್ನು ಶೈಕ್ಷಣಿಕ ವರ್ಷ 2022–23 ನೇ ಸಾಲಿನಿಂದ ಪ್ರಾರಂಭಿಸುವ ಪ್ರಸ್ತಾವನೆ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ನಿಯಮಾನುಸಾರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ:ಸಾಸ.5:49(2022)

**ವಿಷಯ:** ಶೈಕ್ಷಣಿಕ ವರ್ಷ 2022–23ನೇ ಸಾಲಿಗೆ ಸ್ನಾತಕೋತ್ತರ / ಪಿ.ಜಿ. ಡಿಪ್ಲೋಮಾ ಸರ್ಟಿಫಿಕೇಟು ಕಾರ್ಯಕ್ರಮಗಳ ಪ್ರವೇಶಾತಿ ಶುಲ್ಕಗಳನ್ನು ನಿಗದಿಪಡಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾಸ.5:50(2022)

**ವಿಷಯ:** ಮಂಗಳೂರು ವಿಶ್ವವಿದ್ಯಾಣಿಲಯದ ಘಟಕ ಕಾಲೇಜುಗಳ ಸಹ ಪ್ರಾಧ್ಯಾಪಕರುಗಳಿಗೆ ಕೆರಿಯರ್ ಅಡ್ವಾನ್ಸ್‌ಮೆಂಟ್ ಸ್ಕೀಂನಲ್ಲಿ ಪ್ರಾಧ್ಯಾಪಕರಾಗಿ ಪದೋನ್ನತಿ ನೀಡುವ ಬಗ್ಗೆ. – ಪ್ರೊ. ಕರುಣಾಕರ ಎ. ಕೋಟೆಗಾರ್ ಇವರು ಸಲ್ಲಿಸಿರುವ ಪ್ರಸ್ತಾವನೆ

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ:ಸಾಸ.5:51(2022)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ ಅಂತರಾಷ್ಟ್ರೀಯ ವಿದ್ಯಾರ್ಥಿ ನಿಲಯ ಹಾಗೂ ಬೆಳಪು ಇಲ್ಲಿ ನಿರ್ಮಾಣಗೊಳ್ಳುತ್ತಿರುವ ಸಂಶೋಧನಾ ಕಟ್ಟಡದ ಹೆಸರು ಮರು ನಾಮಕರಣ ಮಾಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾಸ.5:52(2022)

**ವಿಷಯ:** ಮಾನ್ಯ ಕರ್ನಾಟಕ ರಾಜ್ಯ ಉಚ್ಛ ನ್ಯಾಯಾಲಯದ ಮಧ್ಯಂತರ ಆದೇಶದನುಸಾರ ವಯೋನಿವೃತ್ತಿಯ ನಂತರ ಸೇವೆಯನ್ನು ಮುಂದುವರಿಸಿದ ಪ್ರಾಧ್ಯಾಪಕರಿಗೆ ಮುಂದುವರಿಸಿರುವ ಸೇವಾ ಅವಧಿಗೆ ವೇತನ ಪಾವತಿಸುವ ಬಗ್ಗೆ.

**ನಿರ್ಣಯ:** ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಪ್ರಸ್ತಾವನೆಯನ್ನು ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಾರ್ವತ್ರಿಕ:ಸಾಸ.5:53(2022)

**ವಿಷಯ:** ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇಲ್ಲಿಯ ವಿದ್ಯಾರ್ಥಿ ಸಹಕಾರ ಸಂಘದ ಕಾರ್ಯ ಚಟುವಟಿಕೆಗಳನ್ನು ಪರಿಶೀಲಿಸಲು ರಚಿಸಿರುವ ಸಮಿತಿ ಸಭೆಯ ವರದಿ.

**ನಿರ್ಣಯ:** ಸಮಿತಿಯ ವರದಿಯನ್ನು ಸಿಂಡಿಕೇಟು ಅಂಗೀಕರಿಸಿತು.

ಮುಂದುವರಿದು, ಚರ ಮತ್ತು ಸ್ಥಿರಾಸ್ತಿಗಳನ್ನು ತಮ್ಮ ವಶಕ್ಕೆ ಪಡೆದುಕೊಂಡಿರುವ ಬಗ್ಗೆ ಸಹಕಾರ ಸಂಘಗಳ ನಿಬಂಧಕರು, ಮಂಗಳೂರು ಇವರಿಗೆ ಪತ್ರ ಬರೆಯಲು ಮತ್ತು ಈ ಬಗ್ಗೆ CCA ನಿಯಮಾವಳಿ ಪ್ರಕಾರ ಮುಂದಿನ ಕ್ರಮ ಕೈಗೊಳ್ಳಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪರೀಕ್ಷಾಂಗ:ಸಾಸ.5:54(2022)
**ವಿಷಯ:** 2022ನೇ ಸಾಲಿನ ಪದವಿ / ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ ಬೇಕಾದ ಉತ್ತರ ಪತ್ರಿಕೆಗಳನ್ನು ವಿದ್ಯುನ್ಮಾನ ಸಂಗ್ರಹಣಾ ವಿಧಾನದ ಇ–ಟೆಂಡರು ಮೂಲಕ ಖರೀದಿಸುವ ಬಗ್ಗೆ.
**ನಿರ್ಣಯ:** ದಿನಾಂಕ 19.07.2022ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ:ಸಾಸ.5:55(2022)
**ವಿಷಯ:** ವಿಶ್ವವಿದ್ಯಾನಿಲಯದ ಆರೋಗ್ಯ ಕೇಂದ್ರಕ್ಕೆ ಅಗತ್ಯವಿರುವ ಔಷಧ/ಔಷಧೀಯ ವಸ್ತುಗಳನ್ನು ಖರೀದಿಸುವ ಬಗ್ಗೆ.
**ನಿರ್ಣಯ:** ಮರುಟೆಂಡರು ಕರೆಯಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ:ಸಾಸ.5:56(2022)
**ವಿಷಯ:** ಶ್ರೀ ಸಂಸ್ಥಾನ ಒಡಿಯೂರು ಸ್ನಾತಕೋತ್ತರ ತುಳು ಅಧ್ಯಯನ ವಿಭಾಗದ ಕಾಮಗಾರಿ ಆರಂಭಿಸಲು ಅನುಮತಿ ನೀಡುವ ಬಗ್ಗೆ.
**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ:ಸಾಸ.5:57(2022)
**ವಿಷಯ:** ಡಿಎಸ್ಟಿ–ಪರ್ಸ್ ಪ್ರಯೋಗಾಲಯದಲ್ಲಿರುವ ಉಪಕರಣಗಳ ಬಳಕೆಗೆ ದರ ಪರಿಷ್ಕರಿಸುವ ಬಗ್ಗೆ.
**ನಿರ್ಣಯ:** ಅನುಮೋದಿಸಲಾಯಿತು.

**ಇತರ ವಿಷಯಗಳು:**

1. ಮಂಗಳೂರು ವಿಶ್ವವಿದ್ಯಾನಿಲಯದ ಮೂರು ಮತ್ತು ಐದು ಸೆಮೆಸ್ಟರ್ ಸ್ನಾತಕ ಕಾರ್ಯಕ್ರಮಗಳ ಫಲಿತಾಂಶಗಳ ಶೀಘ್ರ ಪ್ರಕಟಣೆಗೆ ಕ್ರಮಕೈಗೊಂಡು, ಬಾಕಿಯಿರುವ ಅಂಕಪಟ್ಟಿಗಳನ್ನು ಶೀಘ್ರದಲ್ಲಿ ವಿತರಿಸಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು. ಮುಂದುವರಿದು, ಆರನೇ ಸೆಮೆಸ್ಟರ್‌ನ ಪರೀಕ್ಷೆಗಳನ್ನು ಸೆಪ್ಟೆಂಬರ್ 15ರೊಳಗೆ ಮುಗಿಸಲು ಹಾಗೂ ಮೌಲ್ಯಮಾಪನ ಕಾರ್ಯವನ್ನು ಏಕಕಾಲದಲ್ಲಿ ನಡೆಸಲು ಕ್ರಮ ಕೈಗೊಳ್ಳಬೇಕೆಂಬುದಾಗಿಯೂ ಸಿಂಡಿಕೇಟು ನಿರ್ಣಯಿಸಿತು. ತತ್ಸಂಬಂಧ ತೆಗೆದುಕೊಂಡಿರುವ ಎಲ್ಲಾ ಕಾರ್ಯಯೋಜನೆಯ ವರದಿಯನ್ನು ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಬೇಕೆಂಬುದಾಗಿ ನಿರ್ಣಯಿಸಲಾಯಿತು.

2. ಡಾ. ಜಗನ್ನಾಥ, ಭೌತಶಾಸ್ತ್ರ ವಿಭಾಗ ಇವರನ್ನು ಸದರಿಯವರು ನಿವೃತ್ತಿಯಾಗುವವರೆಗೆ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜಿಗೆ ಮರು ವರ್ಗಾವಣೆ ಮಾಡಬಾರದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

3. ಡಾ. ಇಂದಿರಾ, ಭೌತಶಾಸ್ತ್ರ ವಿಭಾಗ, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇವರನ್ನು ಫೀಲ್ಡ್ ಮಾರ್ಷಲ್ ಕೆ. ಎಂ. ಕಾರ್ಯಪ್ಪ ಕಾಲೇಜಿಗೆ ಆಡಳಿತಾತ್ಮಕ ಹಿತದೃಷ್ಟಿಯಿಂದ ವರ್ಗಾವಣೆ ಮಾಡಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

4. ಇತರೇ ವಿಶ್ವವಿದ್ಯಾನಿಲಯಗಳಿಂದ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆಗೊಂಡಿರುವ ಶಿಕ್ಷಕರುಗಳು ಈ ಹಿಂದೆ ಬೇರೆ ವಿಶ್ವವಿದ್ಯಾನಿಲಯಗಳಲ್ಲಿ ಸೇವೆ ಸಲ್ಲಿಸಿದ ಅವಧಿಯ ಪಿಂಚಣಿ ವಂತಿಗೆಯನ್ನು ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಇಲ್ಲಿಗೆ ವರ್ಗಾಯಿಸುವ ಬಗ್ಗೆ ಕ್ರಮಕೈಗೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

5. ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ನಡೆಸಿದ ಅವ್ಯವಹಾರಗಳ ಕಳೆದ ಐದು ವರ್ಷಗಳ ಅಂಕಿಅಂಶಗಳ ವಿವರಗಳನ್ನು ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

ಮಾನ್ಯ ಕುಲಸಚಿವರು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನು ಅರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

| | |
|---|---|
| **ಸಹಿ/-** | **ಸಹಿ/-** |
| **ಕುಲಸಚಿವರು** | **ಕುಲಪತಿಗಳು.** |